# All India Radio: Bangalore
# National Bulletin In Kannada
## 14.09.2026 07.35 a.m.

ಆಕಾಶವಾಣಿ, ಬೆಂಗಳೂರು

ರಾಷ್ಟ್ರೀಯ ವಾರ್ತೆಗಳು

## 14.09.2026 07.35 a.m.

**<><><><>**

ಮುಖ್ಯಾಂಶಗಳು

1. ಬ್ರಿಕ್ಸ್ ಶೃಂಗಸಭೆ ಯಶಸ್ವಿ ಸಂಪನ್ನ ; ಎಲ್ಲಾ ಜಾಗತಿಕ ನಾಯಕರಿಗೆ ಪ್ರಧಾನಿ ನರೇಂದ್ರ ಮೋದಿ ಕೃತಜ್ಞತೆ
2. ದೇಶಾದ್ಯಂತ ಶ್ರದ್ಧಾ-ಭಕ್ತಿಯೊಂದಿಗೆ ಗಣೇಶ ಚತುರ್ಥಿ ಆಚರಣೆ ; ರಾಷ್ಟ್ರಪತಿ ಸೇರಿದಂತೆ ಗಣ್ಯರಿಂದ ಶುಭಾಶಯ
3. ಓಮನ್ ಕರಾವಳಿ ಬಳಿ ವಾಣಿಜ್ಯ ಹಡಗಿನ ಮೇಲೆ ದಾಳಿ ; ಭಾರತದಿಂದ ತೀವ್ರ ಖಂಡನೆ ; ೧೩ ಭಾರತೀಯ ನಾವಿಕರ ರಕ್ಷಣೆ
4. ಮಹಿಳಾ ಏಷ್ಯಾ ಕಪ್ ಟಿ-೨೦ ಕ್ರಿಕೆಟ್ ; ಶ್ರೀಲಂಕಾವನ್ನು ಮಣಿಸಿ ಎಂಟನೇ ಬಾರಿಗೆ ಚಾಂಪಿಯನ್ ಪಟ್ಟಕ್ಕೇರಿದ ಭಾರತ
5. ಬಿಲ್ಲುಗಾರಿಕೆ ವಿಶ್ವಕಪ್ ಫೈನಲ್ ; ಭಾರತದ ಧೀರಜ್ ಬೊಮ್ಮದೇವರಗೆ ಐತಿಹಾಸಿಕ ಚಿನ್ನದ ಪದಕ

<><><><>

ನವದೆಹಲಿಯಲ್ಲಿ ನಡೆದ ಎರಡು ದಿನಗಳ ಬ್ರಿಕ್ಸ್ ಶೃಂಗಸಭೆಯನ್ನು ಅತ್ಯಂತ ಫಲಪ್ರದ ಹಾಗೂ ಸಫಲಗೊಳಿಸಿದ ಎಲ್ಲಾ ಸದಸ್ಯ ರಾಷ್ಟ್ರಗಳ ನಾಯಕರಿಗೆ ಪ್ರಧಾನಮಂತ್ರಿ ನರೇಂದ್ರ ಮೋದಿ ಕೃತಜ್ಞತೆ ಸಲ್ಲಿಸಿದ್ದಾರೆ. ಕಳೆದ ಎರಡು ದಿನ ಭಾರತದ ಅಧ್ಯಕ್ಷತೆಯಲ್ಲಿ ನಡೆದ ಈ ಶೃಂಗಸಭೆಯ ಪ್ರಮುಖ ಕ್ಷಣಗಳನ್ನು ಒಳಗೊಂಡ ವೀಡಿಯೊವನ್ನು ಪ್ರಧಾನಿಯವರು ತಮ್ಮ ಸಾಮಾಜಿಕ ಜಾಲತಾಣಗಳಲ್ಲಿ ಹಂಚಿಕೊಂಡಿದ್ದಾರೆ. ಬ್ರಿಕ್ಸ್ ಒಕ್ಕೂಟದ ಮೂಲಕ ಭಾರತ, ಸ್ನೇಹ, ಪಾಲುದಾರಿಕೆ ಹಾಗೂ ಸಾರ್ವತ್ರಿಕ ಸಹಕಾರವನ್ನು ಮತ್ತಷ್ಟು ಎತ್ತರಕ್ಕೆ ಕೊಂಡೊಯ್ದಿದೆ ಎಂದು ಪ್ರಧಾನಿ ತಮ್ಮ ಭಾಷಣದಲ್ಲಿ ಹೇಳಿದ್ದರು. ಈ ಶೃಂಗಸಭೆಯಲ್ಲಿ ರಷ್ಯಾ ಅಧ್ಯಕ್ಷ ವ್ಲಾಡಿಮಿರ್ ಪುಟಿನ್, ಚೀನಾ ಅಧ್ಯಕ್ಷ ಕ್ಸಿ ಜಿನ್‌ಪಿಂಗ್, ಇರಾನ್ ಅಧ್ಯಕ್ಷ ಮಸೂದ್ ಪೆಝೆಶ್ಕಿಯನ್, ಅಬುಧಾಬಿಯ ಯುವರಾಜ ಮೊಹಮ್ಮದ್ ಬಿನ್ ಝಾಯೆದ್ ಅಲ್ ನಹ್ಯಾನ್, ಮಲೇಷ್ಯಾ ಪ್ರಧಾನಿ ಅನ್ವರ್

ಇಬ್ರಾಹಿಂ, ವಿಯೆಟ್ನಾಂ ಪ್ರಧಾನಿ ಲೇ ಮಿನ್ ಹಂಗ್, ಇಂಡೋನೇಷ್ಯಾದ ಅಧ್ಯಕ್ಷ ಪ್ರಬೋವೊ ಸುಬಿಯಾಂತೊ, ಈಜಿಪ್ಟ್ ಅಧ್ಯಕ್ಷ ಅಬ್ದೆಲ್ ಫತಾಹ್ ಎಲ್-ಸಿಸಿ, ಫಿಲಿಪ್ಪೈನ್ಸ್ ಅಧ್ಯಕ್ಷ ಫರ್ಡಿನಾಂಡ್ ಆರ್ ಮಾರ್ಕೋಸ್ ಜೂನಿಯರ್ ಹಾಗೂ ಉಗಾಂಡಾದ ಉಪಾಧ್ಯಕ್ಷ ಜೆಸ್ಸಿಕಾ ಅಲುಪೊ ಸೇರಿದಂತೆ ಹಲವು ಪ್ರಮುಖ ಜಾಗತಿಕ ನಾಯಕರು ಪಾಲ್ಗೊಂಡಿದ್ದರು. ೧೧ ಸದಸ್ಯ ರಾಷ್ಟ್ರಗಳು ಹಾಗೂ ೧೦ ಪಾಲುದಾರ ದೇಶಗಳ ನಾಯಕರು ಮತ್ತು ಪ್ರಮುಖ ಅಂತಾರಾಷ್ಟ್ರೀಯ ಸಂಸ್ಥೆಗಳ ಪ್ರತಿನಿಧಿಗಳು ಈ ಸಭೆಯಲ್ಲಿ ಭಾಗವಹಿಸಿದ್ದರು. ಶೃಂಗಸಭೆಯ ನಡುವೆ ಪ್ರಧಾನಿ ಮೋದಿ ಅವರು ಕಳೆದ ಮೂರು ದಿನಗಳಲ್ಲಿ ವಿವಿಧ ದೇಶಗಳ ಮುಖ್ಯಸ್ಥರೊಂದಿಗೆ ಒಟ್ಟು ೧೫ ಪ್ರತ್ಯೇಕ ದ್ವಿಪಕ್ಷೀಯ ಮಾತುಕತೆಗಳನ್ನು ನಡೆಸಿದರು.

<><><><>

ಬುದ್ಧಿ, ಸಮೃದ್ಧಿ ಮತ್ತು ಅದೃಷ್ಟದ ಸಂಕೇತವಾಗಿರುವ ವಿಘ್ನನಿವಾರಕ ಗಣಪತಿಯ ಜನ್ಮದಿನದ ಸಂಕೇತವಾದ ಗಣೇಶ ಚತುರ್ಥಿ ಹಬ್ಬವನ್ನು ಇಂದು ದೇಶಾದ್ಯಂತ ಅತ್ಯಂತ ಶ್ರದ್ಧಾ-ಭಕ್ತಿ ಹಾಗೂ ಸಡಗರದಿಂದ ಆಚರಿಸಲಾಗುತ್ತಿದೆ. 'ವಿನಾಯಕ ಚತುರ್ಥಿ' ಅಥವಾ 'ಗಣೇಶೋತ್ಸವ' ಎಂದೂ ಕರೆಯಲ್ಪಡುವ ಈ ಶುಭ ದಿನ, ಹತ್ತು ದಿನಗಳ ಸುದೀರ್ಘ ಸಾಂಸ್ಕೃತಿಕ ಹಾಗೂ ಧಾರ್ಮಿಕ ಉತ್ಸವದ ಆರಂಭವನ್ನು ಸೂಚಿಸುತ್ತದೆ. ಹಬ್ಬದ ಪ್ರಯುಕ್ತ ಸಾರ್ವಜನಿಕರು ತಮ್ಮ ಮನೆಗಳಲ್ಲಿ ಮತ್ತು ನೂರಾರು ಮಂಟಪಗಳಲ್ಲಿ ಸುಂದರ ಮಣ್ಣಿನ ಗಣಪತಿ ಮೂರ್ತಿಗಳನ್ನು ಪ್ರತಿಷ್ಠಾಪಿಸಿ ವಿಶೇಷ ಪೂಜೆ-ಪುನಸ್ಕಾರಗಳನ್ನು ನೆರವೇರಿಸುತ್ತಿದ್ದಾರೆ. ಹತ್ತು ದಿನಗಳ ಅದ್ದೂರಿ ಆಚರಣೆಯ ಬಳಿಕ ಗಣೇಶ ವಿಸರ್ಜನೆಯೊಂದಿಗೆ ಈ ಉತ್ಸವವು ಮುಕ್ತಾಯಗೊಳ್ಳಲಿದೆ. ಮೂರ್ತಿಗಳನ್ನು ಜಲಮೂಲಗಳಲ್ಲಿ ವಿಸರ್ಜಿಸುವುದು ಸೃಷ್ಟಿ ಮತ್ತು ಲಯದ ನಿರಂತರ ಚಕ್ರವನ್ನು ಸಂಕೇತಿಸುತ್ತದೆ. ಮನೆಗಳು ಮತ್ತು ಭವ್ಯ ಮಂಟಪಗಳಿಂದ ಗಣೇಶ ಮೂರ್ತಿಗಳನ್ನು "ಗಣಪತಿ ಬಪ್ಪ ಮೋರಿಯಾ" ಎಂಬ ಜಯಘೋಷಗಳು, ಭಜನೆಗಳು ಹಾಗೂ ವೈಭವದ ನೃತ್ಯ-ಮೆರವಣಿಗೆಗಳ ಮೂಲಕ ನದಿ, ಸರೋವರ ಹಾಗೂ ಸಮುದ್ರಗಳತ್ತ ಕೊಂಡೊಯ್ದು ಶ್ರದ್ಧೆಯಿಂದ ವಿಸರ್ಜಿಸಲಾಗುತ್ತದೆ. ಮಹಾರಾಷ್ಟ್ರದಲ್ಲಿ ಗಣೇಶೋತ್ಸವವು ಅತ್ಯಂತ ಅಪಾರ ಉತ್ಸಾಹ ಹಾಗೂ ಸಾಂಸ್ಕೃತಿಕ ವೈಭವದೊಂದಿಗೆ ಪ್ರಮುಖ ಆಕರ್ಷಣೆಯಾಗಿ ಆಚರಿಸಲ್ಪಡುತ್ತಿದೆ.

<><><><>

ಗಣೇಶ ಚತುರ್ಥಿಯ ಶುಭ ಸಂದರ್ಭದಲ್ಲಿ ರಾಷ್ಟ್ರಪತಿ ದ್ರೌಪದಿ ಮುರ್ಮು ಅವರು ದೇಶದ ಸಮಸ್ತ ಜನತೆಗೆ ಶುಭಾಶಯ ಕೋರಿದ್ದಾರೆ. ತಮ್ಮ ಸಂದೇಶದಲ್ಲಿ, ಗಣೇಶನು ಬುದ್ಧಿವಂತಿಕೆ, ಸಮೃದ್ಧಿ

ಹಾಗೂ ಮಂಗಳಕರ ಆರಂಭಗಳ ಪ್ರತೀಕವಾಗಿದ್ದಾನೆ ಎಂದು ರಾಷ್ಟ್ರಪತಿ ತಿಳಿಸಿದ್ದಾರೆ. ಗಣೇಶ ಚತುರ್ಥಿಯ ಪವಿತ್ರ ಹಬ್ಬವು ನಮ್ಮ ಜೀವನದಲ್ಲಿ ಹೊಸ ಚೈತನ್ಯ, ಜ್ಞಾನ ಹಾಗೂ ಸಕಾರಾತ್ಮಕತೆ ತುಂಬುತ್ತದೆ ಎಂದು ಅವರು ಬಣ್ಣಿಸಿದ್ದಾರೆ. ಈ ಪವಿತ್ರ ಹಬ್ಬವು ಪ್ರತಿಯೊಬ್ಬರೂ ತಮ್ಮ ಜೀವನದಲ್ಲಿ ನೂತನ ಸಂಕಲ್ಪಗಳೊಂದಿಗೆ ಪ್ರಗತಿಯ ಹಾದಿಯಲ್ಲಿ ಮುನ್ನಡೆಯಲು ಸ್ಫೂರ್ತಿ ನೀಡುತ್ತದೆ ಎಂದು ತಿಳಿಸಿದ್ದಾರೆ. ವಿಘ್ನೇಶ್ವರನು ದೇಶವಾಸಿಗಳೆಲ್ಲರಿಗೂ ಸಂತೋಷ, ಶಾಂತಿ, ಉತ್ತಮ ಆರೋಗ್ಯ ಮತ್ತು ಸಮೃದ್ಧಿಯನ್ನು ಕರುಣಿಸಲಿ ಎಂದು ರಾಷ್ಟ್ರಪತಿ ಅವರು ಪ್ರಾರ್ಥಿಸಿದ್ದಾರೆ.

<><><>

ಓಮನ್ ಕರಾವಳಿಯ ಸಮೀಪ ವಾಣಿಜ್ಯ ಸರಕು ಸಾಗಾಣೆ ಹಡಗು ಎಂ.ಟಿ-ಎಲ್.ಗಯಾ ಮೇಲೆ ನಿನ್ನೆ ನಡೆದ ದಾಳಿಯನ್ನು ಭಾರತ ತೀವ್ರವಾಗಿ ಖಂಡಿಸಿದೆ. ಘಟನೆಗೆ ಸಂಬಂಧಿಸಿದಂತೆ ಓಮನ್‌ನಲ್ಲಿರುವ ಭಾರತೀಯ ರಾಯಭಾರಿ ಕಚೇರಿ ಮಾಹಿತಿ ನೀಡಿದ್ದು, ಹಡಗಿನಲ್ಲಿದ್ದ ೧೩ ಭಾರತೀಯ ಸಿಬ್ಬಂದಿಯನ್ನು ಯಶಸ್ವಿಯಾಗಿ ರಕ್ಷಿಸಲಾಗದ್ದು, ಕಾಣೆಯಾಗಿರುವ ಮತ್ತೊಬ್ಬ ಭಾರತೀಯ ನಾವಿಕನಿಗಾಗಿ ಶೋಧ ಹಾಗೂ ರಕ್ಷಣಾ ಕಾರ್ಯಾಚರಣೆ ಮುಂದುವರೆದಿದೆ ಎಂದು ತಿಳಿಸಿದೆ. ರಾಯಭಾರ ಕಚೇರಿ ಪರಿಸ್ಥಿತಿಯನ್ನು ಸೂಕ್ಷ್ಮವಾಗಿ ಗಮನಿಸುತ್ತಿದ್ದು, ಓಮನ್ ಅಧಿಕಾರಿಗಳೊಂದಿಗೆ ನಿಕಟ ಸಮನ್ವಯ ಸಾಧಿಸುತ್ತಿದೆ. ಪ್ರಾಂತ್ಯದಲ್ಲಿ ಶಾಂತಿ ನೆಲೆಸಲು ತಕ್ಷಣವೇ ಉದ್ವಿಗ್ನತೆ ಶಮನಗೊಳಿಸಬೇಕು ಮತ್ತು ರಾಜತಾಂತ್ರಿಕ ಮಾತುಕತೆಗಳಿಗೆ ಆದ್ಯತೆ ನೀಡಬೇಕೆಂದು ಭಾರತ ಪುನರುಚ್ಚರಿಸಿದ್ದು, ವಾಣಿಜ್ಯ ಹಡಗುಗಳು, ನಾವಿಕರು, ಸಾಮಾನ್ಯ ನಾಗರಿಕರು ಹಾಗೂ ನಾಗರಿಕ ಮೂಲಸೌಕರ್ಯಗಳನ್ನು ಗುರಿಯಾಗಿಸಿಕೊಂಡು ದಾಳಿ ನಡೆಸುವುದು ಎಂದೂ ಸ್ವಿಕಾರಾರ್ಹವಲ್ಲ ಎಂದು ಪ್ರತಿಪಾದಿಸಿದೆ.

<><><>

ಭಾರತೀಯ ಸಂವಿಧಾನ ರಚನಾ ಸಭೆ ದೇವನಾಗರಿ ಲಿಪಿಯಲ್ಲಿರುವ ಹಿಂದಿಯನ್ನು ದೇಶದ ಅಧಿಕೃತ ಭಾಷೆಯಾಗಿ ಅಂಗೀಕರಿಸಿದ ಐತಿಹಾಸಿಕ ದಿನದ ಸ್ಮರಣಾರ್ಥ ಇಂದು ದೇಶಾದ್ಯಂತ ಹಿಂದಿ ದಿವಸ್ ಅನ್ನು ಆಚರಿಸಲಾಗುತ್ತಿದೆ. ೧೯೪೯ರ ಸೆಪ್ಟೆಂಬರ್ ೧೪ ರಂದು ಈ ನಿರ್ಧಾರ ಕೈಗೊಳ್ಳಲಾಗಿದ್ದು, ಪ್ರಸ್ತುತ ವಿಶ್ವದಲ್ಲೇ ಅತ್ಯಂತ ವ್ಯಾಪಕವಾಗಿ ಮಾತನಾಡಲ್ಪಡುವ ಭಾಷೆಗಳಲ್ಲಿ ಒಂದಾಗಿರುವ ಹಿಂದಿ ೫೨ ಕೋಟಿಗೂ ಹೆಚ್ಚು ಜನರ ಮಾತೃ ಭಾಷೆಯಾಗಿದೆ. ಹಿಂದಿ ದಿವಸ್ ೨೦೨೬ರ ಅಂಗವಾಗಿ ನವಿ ಮುಂಬೈನಲ್ಲಿ ಆಯೋಜಿಸಲಾಗಿರುವ ೬ನೇ ಅಖಿಲ ಭಾರತ ರಾಜಭಾಷಾ ಸಮ್ಮೇಳನದಲ್ಲಿ ಕೇಂದ್ರ ಗೃಹ ಸಚಿವ ಅಮಿತ್ ಶಾ ಭಾಗವಹಿಸಲಿದ್ದಾರೆ. ಎರಡು

ದಿನಗಳ ಈ ಸಮ್ಮೇಳನದಲ್ಲಿ ವಿದ್ವಾಂಸರು, ಸಾಹಿತಿಗಳು, ಶಿಕ್ಷಣ ತಜ್ಞರು, ಸಂಸದರು, ಹಿರಿಯ ಸರ್ಕಾರಿ ಅಧಿಕಾರಿಗಳು ಮತ್ತತರರು ಪಾಲ್ಗೊಳ್ಳಲಿದ್ದಾರೆ. ಹಿಂದಿ ಭಾಷೆಯ ಅಭಿವೃದ್ಧಿ ಮತ್ತು ಇತರ ಭಾರತೀಯ ಭಾಷೆಗಳೊಂದಿಗೆ ಅದರ ಸೌಹಾರ್ದಯುತ ಸಮನ್ವಯತೆ ಕುರಿತು ಸಮಾವೇಶದಲ್ಲಿ ಚರ್ಚೆಗಳು ನಡೆಯಲಿವೆ.

<><><><>

ದುಬೈನಲ್ಲಿ ನಿನ್ನೆ ರಾತ್ರಿ ನಡೆದ ಮಹಿಳೆಯರ ಏಷ್ಯಾ ಕಪ್ ೨೦೨೬ ರ ಫೈನಲ್ ಪಂದ್ಯದಲ್ಲಿ ಶ್ರೀಲಂಕಾ ವಿರುದ್ಧ ೭೨ ರನ್‌ಗಳ ಭರ್ಜರಿ ಜಯ ಸಾಧಿಸಿದ ಭಾರತೀಯ ಮಹಿಳಾ ಕ್ರಿಕೆಟ್ ತಂಡವು, ಸಾರ್ವಕಾಲಿಕ ದಾಖಲೆಯ ಎಂಟನೇ ಬಾರಿಗೆ ಏಷ್ಯಾ ಕಪ್ ಕಿರೀಟವನ್ನು ಮುಡಿಗೇರಿಸಿಕೊಂಡಿದೆ. ಈ ಗೆಲುವಿನೊಂದಿಗೆ ೨೦೨೪ರ ಫೈನಲ್‌ನಲ್ಲಿ ಶ್ರೀಲಂಕಾ ವಿರುದ್ಧ ಅನುಭವಿಸಿದ್ದ ಸೋಲಿಗೆ ಭಾರತೀಯ ಪಡೆ ಪ್ರತ್ಯುತ್ತರ ನೀಡಿದೆ. ಏಕದಿನ ಹಾಗೂ ಟಿ-೨೦ ಎರಡೂ ಆವೃತ್ತಿಗಳನ್ನೊಳಗೊಂಡ ಏಷ್ಯಾಕಪ್ ಫೈನಲ್ ಇತಿಹಾಸದಲ್ಲೇ ಶ್ರೀಲಂಕಾ ವಿರುದ್ಧ ಭಾರತಕ್ಕೆ ಲಭಿಸಿದ ಆರನೇ ಜಯ ಇದಾಗಿದೆ. ಆರಂಭಿಕ ಆಟಗಾರ್ತಿಯರಾದ ಶಫಾಲಿ ವರ್ಮಾ ಮತ್ತು ಸ್ಮೃತಿ ಮಂಧಾನ ಅವರ ೧೨೯ ರನ್‌ಗಳ ದಾಖಲೆಯ ಜೊತೆಯಾಟದ ನೆರವಿನಿಂದ ಭಾರತ ನಿಗದಿತ ಓವರ್‌ಗಳಲ್ಲಿ ೫ ವಿಕೆಟ್ ನಷ್ಟಕ್ಕೆ ೧೮೩ ರನ್‌ಗಳ ಬೃಹತ್ ಮೊತ್ತವನ್ನು ಗಳಿಸಿತು. ಸವಾಲಿನ ಗುರಿ ಬೆನ್ನಟ್ಟಿದ ಶ್ರೀಲಂಕಾ, ೧೯.೪ ಓವರ್‌ಗಳಲ್ಲಿ ೧೧೧ ರನ್‌ಗಳಿಗೆ ತನ್ನೆಲ್ಲ ವಿಕೆಟ್ ಕಳೆದುಕೊಂಡಿತು. ಶ್ರೀ ಚರಣಿ ನಾಲ್ಕು ವಿಕೆಟ್ ಹಾಗೂ ದೀಪ್ತಿ ಶರ್ಮಾ ಮೂರು ವಿಕೆಟ್ ಕಸಿದು ತಂಡದ ಗೆಲುವಿಗೆ ಪ್ರಮುಖ ಪಾತ್ರ ವಹಿಸಿದರು. ಅರ್ಧಶತಕದೊಂದಿಗೆ ತಂಡಕ್ಕೆ ಆಸರೆಯಾದ ಶಫಾಲಿ ವರ್ಮಾ 'ಪಂದ್ಯಶ್ರೇಷ್ಠ' ಪ್ರಶಸ್ತಿಗೆ ಭಾಜನರಾದರು.

<><><><>

ವಿಶ್ವದ ೧೦ ನೇ ಶ್ರೇಯಾಂಕಿತ ಭಾರತೀಯ ಬಿಲ್ಲುಗಾರ ಹಾಗೂ ಸೇನಾಪಡೆಯ ಯೋಧ ಧೀರಜ್ ಬೊಮ್ಮದೇವರ, ಮೆಕ್ಸಿಕೋದ ಸಲ್ಟಿಲ್ಲೋನಲ್ಲಿ ನಡೆದ ಬಿಲ್ಲುಗಾರಿಕೆ ವಿಶ್ವಕಪ್ ಫೈನಲ್ಸ್‌ನಲ್ಲಿ ಸ್ವರ್ಣ ಪದಕ ಮುಡಿಗೇರಿಸಿಕೊಳ್ಳುವ ಮೂಲಕ ಐತಿಹಾಸಿಕ ಸಾಧನೆ ಮಾಡಿದ್ದಾರೆ. ಈ ಮೂಲಕ ವಿಶ್ವಕಪ್ ಫೈನಲ್ಸ್ ಆವೃತ್ತಿಯಲ್ಲಿ ಚಿನ್ನದ ಪದಕ ಗೆದ್ದ ಭಾರತದ ಮೊದಲ ಪುರುಷ ರಿಕರ್ವ್ ಬಿಲ್ಲುಗಾರ ಎಂಬ ಹೆಗ್ಗಳಿಕೆಗೆ ೨೫ ವರ್ಷದ ಧೀರಜ್ ಪಾತ್ರರಾಗಿದ್ದಾರೆ. ಫೈನಲ್ ಪಂದ್ಯದ ಶೂಟ್-ಆಫ್‌ನಲ್ಲಿ ಜಪಾನ್‌ನ ನಕಾನಿಷಿ ಜುನ್ಯಾ ಅವರನ್ನು ಮಣಿಸಿ ಈ ಐತಿಹಾಸಿಕ ಕಿರೀಟವನ್ನು ತಮ್ಮದಾಗಿಸಿಕೊಂಡರು. ಕ್ವಾರ್ಟರ್‌ಫೈನಲ್ ಹಾಗೂ ಸೆಮಿಫೈನಲ್ ಪಂದ್ಯಗಳಲ್ಲಿ ಅಸಾಧಾರಣ

ಪ್ರದರ್ಶನ ನೀಡಿದ ಧೀರಜ್, ಫೈನಲ್ಸ್‌ನಲ್ಲಿ ವಿಶ್ವದ ೨೦ನೇ ಶ್ರೇಯಾಂಕದ ನಕಾನಿಷಿ ಜುನ್ಯಾ ವಿರುದ್ಧ ೫-೫ ಅಂಕಗಳ ಸಮಬಲದ ನಂತರ ಶೂಟ್-ಆಫ್‌ನಲ್ಲಿ ೧೦-೯ ಅಂತರದಿಂದ ರೋಚಕ ಜಯ ಸಾಧಿಸಿದರು. ೨೦೧೦ರಲ್ಲಿ ಎಡಿನ್‌ಬರ್ಗ್‌ನಲ್ಲಿ ನಡೆದ ಕೂಟದಲ್ಲಿ ಜಯಂತ ತಾಲೂಕ್ದಾರ್ ಅವರು ಕಂಚಿನ ಪದಕ ಗೆದ್ದುಕೊಂಡಿದ್ದು ಈವರೆಗಿನ ಭಾರತದ ಕೊನೆಯ ಸಾಧನೆಯಾಗಿತ್ತು. ೨೦೦೭ರ ದುಬೈ ಆವೃತ್ತಿಯ ಮಹಿಳೆಯರ ವಿಭಾಗದಲ್ಲಿ ಡೋಲಾ ಬ್ಯಾನರ್ಜಿ ಅವರು ವಿಶ್ವಕಪ್ ಫೈನಲ್ಸ್‌ನಲ್ಲಿ ಚಿನ್ನದ ಪದಕ ಗೆದ್ದ ಮೊದಲ ಭಾರತೀಯ ಎಂಬ ದಾಖಲೆ ಬರೆದಿದ್ದರು. ಇದೀಗ ಧೀರಜ್ ಬೊಮ್ಮದೇವರ ಅವರು ಈ ಸಾಲಿಗೆ ಸೇರ್ಪಡೆಗೊಂಡ ಎರಡನೇ ಭಾರತೀಯ ಹಾಗೂ ಪ್ರಥಮ ಪುರುಷ ಕ್ರೀಡಾಪಟು ಎನಿಸಿಕೊಂಡಿದ್ದಾರೆ.

<><> ಇಲ್ಲಿಗೆ ವಾರ್ತಾ ಪ್ರಸಾರ ಮುಕ್ತಾಯವಾಯಿತು <><>